ಮಧ್ಯಂತರ ಅರ್ಜಿ ಸಂಖ್ಯೆ **- 2** ರ ಕುರಿತಾದ ಆದೇಶ

ಡಿಕ್ರಿದಾರರ ಪರ ವಕೀಲರು ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-2 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಪೂರಕವಾಗಿ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ಅಮಲ್ಜಾರಿ ಅರ್ಜಿಯ ಅನುಸೂಚಿತ ಸ್ವತ್ತು ಸರ್ವೆ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೊಂದಣಿ ಮಾಡಿಸುವ ಅಗತ್ಯತೆಗಾಗಿ 11 ಇ ನಕ್ಷೆಯನ್ನು ತಯಾರಿಸಿ ವರದಿಯನ್ನು ಮಾಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರು ರವರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

**2.** ಈ ಮೇಲ್ಕಂಡ ಮಧ್ಯಂತರ ಅರ್ಜಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇದೆಃ

ತಾನು ಈ ಪ್ರಕರಣದ ಡಿಕ್ರಿದಾರನಾಗಿದ್ದು, ಪ್ರಸ್ತುತ ಈ ಅಮಲ್ಜಾರಿ ಅರ್ಜಿಯನ್ನು ತೀರ್ಪುಋಣಿದಾರನ ವಿರುದ್ಧ ಅಸಲು ದಾವಾ ಸಂಖ್ಯೆಃ 672/2018 ನ್ನು ಡಿಕ್ರಿಯ ಪ್ರಕಾರ ನೊಂದಣಿ ಮಾಡಿಸಿಕೊಳ್ಳುವ ಸಲುವಾಗಿ ಸಲ್ಲಿಸಿರುತ್ತೇನೆ. ಆದಾಗ್ಯೂ ತೀರ್ಪುಋಣಿದಾರರು ಅಮಲ್ಜಾರಿ ಅನುಸೂಚಿತ ಸ್ವತ್ತು ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಗುಬ್ಬಿಹಳ್ಳಿ ಗ್ರಾಮದ ಸರ್ವೆ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿನ ಕುರಿತಾಗಿ ನೋಂದಣಿ ಮಾಡಿಸಿಕೊಡಲು ಬಂದಿರುವುದಿಲ್ಲ. ಹಾಗಾಗಿ ತಾನು ಅರ್ಜಿಯನ್ನು ಸಲ್ಲಿಸಿ, ಕ್ರಯ ನೋಂದಣಿಯನ್ನು ಮಾಡಿಸಿಕೊಡುವ ಸಲುವಾಗಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಿಸುವಂತೆ ಕೋರಿರುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರುರವರಿಗೆ ನ್ಯಾಯಾಲಯದ ನಿಯೋಗಿಯ ವಾರಂಟ್ ಜಾರಿಗೊಳಿಸಿ ಕ್ರಯ ನೋಂದಣಿಯನ್ನು ಮಾಡಿಸಿಕೊಡುವಂತೆ ಸೂಚಿಸಿದ್ದರು. ತದನಂತರದಲ್ಲಿ ನ್ಯಾಯಾಲಯದ ನಿಯೋಗಿಯು ಕಡೂರಿನ ಉಪ ನೋಂದಣಾಧಿಕಾರಿಗಳಿಗೆ ಸದರಿ ಕ್ರಯ ನೋಂದಣಿ ಮಾಡಿಸಿಕೊಡುವಂತೆ ಕೋರಿದ್ದರು. ಆದರೆ ಕಡೂರಿನ ಉಪ-ನೋಂದಣಾಧಿಕಾರಿಗಳು ಅಮಲ್ಜಾರಿ ಅನುಸೂಚಿತ ಸ್ವತ್ತು ಸರ್ವೆ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಗಾಗಿ 11 ಇ ನಕ್ಷೆಯ ಅಗತ್ಯತೆ ಇದೆ ಎಂದು ಹೇಳಿ ನೋಂದಣಿಯನ್ನು ಮಾಡಲು ನಿರಾಕರಿಸಿರುತ್ತಾರೆ. ಹಾಗಾಗಿ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅನುಸೂಚಿತ ಸ್ವತ್ತಿನ

ನೋಂದಣಿಗಾಗಿ 11 ಇ ನಕ್ಷೆಯ ಅಗತ್ಯತೆ ಇದ್ದು, ಅರ್ಜಿಯಲ್ಲಿ ಕೋರಿರುವಂತೆ ಅಮಲ್ಜಾರಿ ಅನುಸೂಚಿತ ಸ್ವತ್ತು ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಗಾಗಿ 11 ಇ ನಕ್ಷೆಯನ್ನು ತಯಾರಿಸಿ ಕೊಡುವಂತೆ ಸೂಚಿಸಬೇಕೆಂದು ಕೋರಿರುತ್ತಾರೆ.

**3.** ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ ಃ

1. ಡಿಕ್ರಿದಾರರು ಮಧ್ಯಂತರ ಅರ್ಜಿ-2 ರಲ್ಲಿ ಕೋರಿರುವಂತೆ ಅಮಲ್ಜಾರಿ ಅನುಸೂಚಿತ ಸ್ವತ್ತು ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಗುಬ್ಬಿಹಳ್ಳಿ ಗ್ರಾಮದ ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಗಾಗಿ 11 ಇ ನಕ್ಷೆಯನ್ನು ತಯಾರಿಸಿ ವರದಿ ಮಾಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಕ ಮಾಡಬೇಕೆಂದು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೆ?
2. ಹಾಗಿದ್ದಲ್ಲಿ ಯಾವ ಆದೇಶ?

**4.** ಡಿಕ್ರಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ಮೇಲ್ಕಾಣಿಸಿದ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ ಃ

ಅಂಶ – 1 ಃ ಸಕಾರಾತ್ಮಕವಾಗಿ,

ಅಂಶ – 2 ಃ ಅಂತಿಮ ಆದೇಶದಂತೆ,

<u>ಕಾ ರ ಣ ಗ ಳು</u>

**6.** **<u>ಅಂಶ – 1</u>** ಃ ಡಿಕ್ರಿದಾರರು ಪ್ರಸ್ತುತ ಈ ಅಮಲ್ಜಾರಿ ಅರ್ಜಿಯನ್ನು ತೀರ್ಪುಋಣಿದಾರರ ವಿರುದ್ಧ ಅಸಲು ದಾವಾ ಸಂಖ್ಯೆಃ 672/2018 ರ ತೀರ್ಪು ಮತ್ತು ಡಿಕ್ರಿಯ ಕುರಿತಾಗಿ ನೋಂದಣಿ ಪ್ರಕ್ರಿಯೆಗಾಗಿ ಕೋರಿ ಸಲ್ಲಿಸಿರುತ್ತಾರೆ. ಡಿಕ್ರಿದಾರರು ಪ್ರಸ್ತುತ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿದ ನಂತರ ತೀರ್ಪುಋಣಿದಾರರಿಗೆ ಅಮಲ್ಜಾರಿ ಅರ್ಜಿಯ ಕುರಿತಾದ ನೋಟೀಸನ್ನು ಜಾರಿಗೊಳಿಸಿದ್ದು, ಆದಾಗ್ಯೂ ಕೂಡ ತಮ್ಮ ವಕೀಲರ ಮೂಲಕ ಹಾಜರಾಗಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ತದನಂತರದಲ್ಲಿ ಡಿಕ್ರಿದಾರರು ಮಧ್ಯಂತರ ಅರ್ಜಿ

ಸಂಖ್ಯೆಃ 2 ನ್ನು ಸಲ್ಲಿಸಿ, ಅಮಲ್ಜಾರಿ ಅರ್ಜಿಯ ಸ್ವತ್ತು ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಮಾಡಿಸಿಕೊಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರುರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಿಸಬೇಕೆಂದು ಕೋರಿದ್ದು, ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿರುತ್ತದೆ.

**7.** ಈ ಕುರಿತು ನ್ಯಾಯಾಲಯದ ದಾಖಲಾತಿಗಳನ್ನು ಹಾಗೂ ಕಾನೂನಿನ ಅಂಶಗಳನ್ನು ಪರಿಶೀಲಿಸಿದಾಗ, ಕಡೂರಿನ ಉಪ-ನೋಂದಣಾಧಿಕಾರಿಗಳು, ನ್ಯಾಯಾಲಯದ ಡಿಕ್ರಿ ಮತ್ತು ತೀರ್ಪಿನ ಪ್ರಕಾರವಾಗಿ ನಿರ್ಧಿಷ್ಟ ನೆರವೇರಿಕೆಗಳ ಕುರಿತ ದಾವೆಯಲ್ಲಿ ಡಿಕ್ರಿಯ ಅನುಸೂಚಿತ ಸ್ವತ್ತು ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಗಾಗಿ 11 ಇ ನಕ್ಷೆಯನ್ನು ಕೇಳಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ದಿನಾಂಕಃ 19.12.2020 ರ ಡಿಕ್ರಿಯ ಪಾಲನೆಗಾಗಿ, ದಾವಾ ಅನುಸೂಚಿತ ಸ್ವತ್ತು ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಗುಬ್ಬಿಹಳ್ಳಿ ಗ್ರಾಮದ ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಮಾಡಿಸಿಕೊಳ್ಳಲು ಹಾಗೂ ಸ್ವಾಧೀನತೆ ಪಡೆದುಕೊಳ್ಳಲು ಅರ್ಜಿಯಲ್ಲಿ ಕೋರಿರುವಂತೆ ಸದರಿ ಸ್ವತ್ತಿನ ಕುರಿತಾದ 11 ಇ ನಕ್ಷೆಯನ್ನು ತಯಾರಿಸಿ ವರದಿ ಮಾಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರು ರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಿಸುವಂತೆ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಮಾಲ್ಜಾರಿ ಅನುಸೂಚಿತ ಸ್ವತ್ತು ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಗುಬ್ಬಿಹಳ್ಳಿ ಗ್ರಾಮದ ಸರ್ವೇ ನಂಬರ್ ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿನ ಕುರಿತಾಗಿ 11 ಇ ನಕ್ಷೆಯನ್ನು ತಯಾರಿಸಿ 30 ದಿನಗಳ ಒಳಗಾಗಿ ವರದಿಯನ್ನು ನೀಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸೂಚಿಸಲಾಗಿದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ-1 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**8.** <u>ಅಂಶ – 2</u> ಃ- ಈಗಾಗಲೇ ಮೇಲ್ಕಂಡ ಅಂಶ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಿರುವುದರಿಂದ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆಃ-

ಆದೇಶ

ಡಿಕ್ರಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಲಾಗಿದೆ.

ಅಮಲ್ದಾರಿ ಅನುಸೂಚಿತ ಸ್ವತ್ತು ಗ್ರಾಮದ ಸರ್ವೇ ನಂಬರ್ ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿನ ಕುರಿತಾಗಿ ನೋಂದಣಿ ಪ್ರಕ್ರಿಯೆಗಾಗಿ 11 ಇ ನಕ್ಷೆ ಅಗತ್ಯತೆ ಇದ್ದು, ಹಾಗಾಗಿ ಈ ನಿಯೋಗಿಯ ವಾರಂಟ್ ತಲುಪಿದ 30 ದಿನಗಳ ಒಳಗಾಗಿ ಅಮಲ್ದಾರಿ ಅನುಸೂಚಿತ ಸ್ವತ್ತು ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಗುಬ್ಬಿಹಳ್ಳಿ ಗ್ರಾಮದ ಸರ್ವೇ ನಂಬರ್ ಸರ್ವೇ ನಂಬರ್ 34/P-p15 ರಲ್ಲಿ 1 ಎಕರೆ ಸ್ವತ್ತಿನ ಪೈಕಿ 0.20 ಗುಂಟೆ ಸ್ವತ್ತಿನ 11 ಇ ನಕ್ಷೆಯನ್ನು ತಯಾರಿಸಿ, ನ್ಯಾಯಾಲಯಕ್ಕೆ ವರದಿ ಮಾಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕಡೂರು ರವರಿಗೆ ಸೂಚಿಸಲಾಗಿದೆ.

ನ್ಯಾಯಾಲಯದ ನಿಯೋಗಿಗೆ ಡಿಕ್ರಿಯ ಪ್ರತಿಯನ್ನು ಕಳುಹಿಸಲು ಸೂಚಿಸಲಾಗಿದೆ.

ಈ ಪ್ರಕರಣವನ್ನು ನ್ಯಾಯಾಲಯದ ನಿಯೋಗಿಯ ವರದಿಗಾಗಿ ನಿಗದಿಪಡಿಸಿ ದಿನಾಂಕ 03.03.2025 ಕ್ಕೆ ನಿಗಧಿಪಡಿಸಿ ಮುಂದೂಡಲಾಗಿದೆ.

ಸಹಿ/-

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ. ಕಡೂರು.